5

# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/106/2015-16 ದಿನಾಂಕ:22.09.2016

ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| *ಅರ್ಜಿದಾರರು* | *ತಕರಾರುದಾರರು* |
|---|---|
| ಪೂಜಾರ ಕಾಳಮ್ಮ ಗಂಡ ಲೇಟ್ ಪೂಜಾರ ಹನುಮಂತಪ್ಪ<br>ಗ್ರಾಮ:-ವಟ್ಟಮನಹಳ್ಳಿ ತಾ:-ಹೆಚ್.ಬಿ.ಹಳ್ಳಿ | ಬಿ.ಜಗಧೀಶ ತಂದೆ ವಿರೂಪಾಕ್ಷಪ್ಪ<br>ಗ್ರಾಮ:-ವಟ್ಟಮನಹಳ್ಳಿ ತಾ:-ಹೆಚ್.ಬಿ.ಹಳ್ಳಿ |

**ವಿವಾದಿತಜಮೀನಿನ ವಿವರ:**

| *ಕ್ರ.ಸಂ.* | *ತಾಲೂಕು* | *ಗ್ರಾಮದ ಹೆಸರು* | *ಸ.ನಂ.* | *ವಿಸ್ತೀರ್ಣ(ಎಕರೆಗಳಲ್ಲಿ)* | *ತರಹೆ* |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ವರ್ಲಹಳ್ಳಿ | 446 | 10-51 | ಖುಷ್ಕಿ |

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ವರ್ಲಹಳ್ಳಿ ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ವಟ್ಟಮನಹಳ್ಳಿ ಗ್ರಾಮದ ನಿವಾಸಿಯಾದ ಪೂಜಾರ ಕಾಳಮ್ಮ ಗಂಡ ಲೇಟ್ ಪೂಜಾರ ಹನುಮಂತಪ್ಪ ಇವರು ಪೌತಿ ವಾರಸು ಪ್ರಕಾರ ಹಕ್ಕುಬದಲಾವಣೆಯನ್ನು ಮಾಡಲು ದಿನಾಂಕ:17.03.2016 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟೀಸನ್ನು ದಿನಾಂಕ:31.03.2016 ರಂದು ಜಾರಿಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ:02.05.2016 ರಂದು ಬಿ.ಜಗಧೀಶ ತಂದೆ ವಿರೂಪಾಕ್ಷಪ್ಪ ಲಿಖಿತವಾಗಿ ಆಕ್ಷೇಪಣೆ ಸಲ್ಲಿಸಿರುತ್ತಾರೆ. ಕಾರಣ, ಎಂ.ಆರ್.ನಂ.93/15-16ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ಇವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯರಿಗೆ ದಿನಾಂಕ:19.05.2016ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:19.05.2016 ರಿಂದ 08.09.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ಉಭಯರು ಹಾಜರಾಗಿರುತ್ತಾರೆ. ತಕರಾರುದಾರರು ಹಾಜರಾಗಿ ಹೇಳುವಂತೆ; ಸದರಿ ಜಮೀನಿನಲ್ಲಿ ದುರುಗಮ್ಮ ದೇವಸ್ಥಾನಕ್ಕೆ ವಿಸ್ತೀರ್ಣ 2-00 ಎಕರೆ, ಈಶ್ವರ ದೇವಸ್ಥಾನಕ್ಕೆ ವಿಸ್ತೀರ್ಣ 2-00 ಎಕರೆ ಜಮೀನು ಗ್ರಾಮಸ್ಥರ ಪರವಾಗಿ ದೇವಸ್ಥಾನಕ್ಕೆ ನೀಡಲು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಪ್ರಕರಣದಲ್ಲಿ ಅರ್ಜಿದಾರರು ಹೇಳುವಂತೆ; ಸದರಿ ಜಮೀನು ನನ್ನ ಗಂಡನ ಆಸ್ತಿಯಾಗಿದ್ದು, ನನ್ನ ಗಂಡ ಪೌತಿಯಾಗಿರುತ್ತಾರೆ. ಸದರಿ ಜಮೀನು ನನ್ನ ಹಕ್ಕು ಅಧೀನ ಸ್ವಾಧೀನದಲ್ಲಿರುತ್ತದೆ. ಮತ್ತು ಅನುಭವದಲ್ಲಿರುತ್ತದೆ. ತಕರಾರುದಾರರಿಗೂ ಮತ್ತು ನನಗೂ ಯವುದೇ ರೀತಿಯ ಸಂಬಂಧ ಇರುವುದಿಲ್ಲ. ಕಾರಣ, ಪೌತಿ ವಾರಸು ಪ್ರಕಾರ ನನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಹೇಳಿಕೆಯನ್ನು ನೀಡಿರುತ್ತಾರೆ.

ಪುಟ-2ಕ್ಕೆ..

ಪ್ರಕರಣದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ನೀಡಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ, ಪ್ರಕರಣದಲ್ಲಿ ಅರ್ಜಿದಾರರ ಹೆಸರಿಗೆ ಪೌತಿ ವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡಂತೆ ಆದೇಶ;

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಎಂ.ಆರ್.ನಂ.93/2015-16ರ ಪ್ರಕಾರ, ಪ್ರಕರಣದಲ್ಲಿ ವರ್ಲಹಳ್ಳಿ ಗ್ರಾಮದ 446 ವಿಸ್ತೀರ್ಣ 10-51 ಎಕರೆ ಜಮೀನಿಗೆ ಅರ್ಜಿದಾರರಾದ ಪೂಜಾರ ಕಾಳಮ್ಮ ಗಂಡ ಲೇಟ್ ಪೂಜಾರ ಹನುಮಂತಪ್ಪ ಇವರ ಹೆಸರಿಗೆ ಪೌತಿ ವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:22.09.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

22/9/16

[ವಿ.ಹೆಚ್.ಮಲ್ಲಿಕಾರ್ಜುನ]
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,ಕೋಗಳಿ

ಉಪ ತಹಶೀಲ್ದಾರರು,
ನಾಡ ಕಛೇರಿ, ಕೋಗಳಿ

ಪ್ರತಿಯನ್ನು:-

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಕಂದಾಯ ನಿರೀಕ್ಷಕರು, ಕೋಗಳಿ.
4. ಶುದ್ಧಪ್ರತಿ ಕಡತಕ್ಕೆ.